ಮಾಡಿ ತಂದದ್ದಿಲ್ಲ... ಎಲ್ಲವೂ ಅವನ ಕೈಯಲ್ಲಿ. ಮನೆಗೆ ಸಾಮಾನು ತಂದು ಹಾಕಿದ ಮೇಲೆ ಬೇರೇನು ಖರ್ಚು ಇರುತ್ತದೆ. ಹಾಗೇನಾದರೂ ಇದ್ದರೆ ಕೇಳಿ ತೆಗೆದುಕೋ ಎನ್ನುವುದು ಬರೀ ಬಾಯಿಮಾತಿಗೆ. ಐದು ನೂರು ತೆಗೆದುಕೊಂಡರೂ ಯಾವ್ಯಾವುದು ಯಾವುದಕ್ಕೆ ಎಂದು ಲೆಕ್ಕ ಕೊಡಬೇಕು... ಇಷ್ಟು ವರ್ಷದಿಂದ ಹೀಗೇ ನಡೆದುಕೊಂಡು ಬಂದಿದೆ. ಕೆಲಸ ಜಾಸ್ತಿಯಾಗಿ ಜಡ್ಡು ಬಿದ್ದರೆ ಆಸ್ಪತ್ರೆಗೆ ಒಯ್ಯುತ್ತಾನೆ ಬಿಟ್ಟರೆ, ತಾನೊಂಚೂರು ಕೆಲಸದಲ್ಲಿ ಸಹಾಯ ಮಾಡುವಾ ಎಂದು ನೋಡಲ್ಲ... ಸಿಟ್ಟು, ಜಗಳ, ಅಳು ಯಾವುದಕ್ಕೂ ಮೂರು ಕಾಸಿನ ಕಿಮ್ಮತ್ತಿಲ್ಲ... ಅಂತ ಸಮಯದಲ್ಲಿ ಬೈಕ್ ತೆಗೆದುಕೊಂಡು ಹೊರಟಬಿಡುತ್ತಾನೆ ಹೊರಗೆ. 'ಅವನು ಗಂಡಸು ಕುಣಿಯುತ್ತಾನೆಂದು ನೀನು ಕುಣಿಲಿಕ್ಕಾಗ್ತದಾ' ಅಜ್ಜಿ ಮತ್ತು ಅತ್ತೆಯ ಮಾತು... ಹೌದು, ತಾನು ಮನೆ ಮಠ ಮಗ ಎಲ್ಲ ಬಿಟ್ಟು ಹೊರಟುಬಿಡಲು ತಾವೆಲ್ಲಿದೆ ತನಗೆ... ಅವನ ಹಾಗೆ ಕಟ್ಟೆ ಮೇಲೆ ಹೋಗಿ ಕುಳಿತರೆ ಪಾಡಾದೀತೇ... ಸಾವಿರ ಜನರ ಕಣ್ಣು ತನ್ನ ಮೇಲೆಯೇ ಬಿದ್ದೀತು... ಜನ ಹೇಳುತ್ತಾರೆ, ಕಾಲ ಬದಲಾಗಿದೆ, ಹೆಣ್ಣುಮಕ್ಕಳ ಸ್ಥಿತಿ ಬಹಳ ಉನ್ನತಕ್ಕೇರಿದೆ ಎಂದು... ಆದರೆ ನಿಜ ಪರಿಸ್ಥಿತಿ ಹೀಗಿದೆಯೇ?

ಒಂದೆರಡು ಸುಳ್ಳು ಕಾರಣ ಸೃಜಿಸಿ ಮನಸ್ಸಿಗೆ ಸಮಾಧಾನ ಹೇಳಿಕೊಂಡರೂ ರಾತ್ರಿ ಹೊತ್ತು ಅವನು ಹತ್ತಿರ ಬಂದಾಗ ಕಾರೇಮುಳ್ಳು ಪರಚಿದ ಹಾಗೆ ಆಗುತ್ತದೆ. ಇರುವ ಒಂದು ರವಿವಾರ ಇಡೀ ಮನೆ ಬಲೆ ಹೊಡೆದು ಕಿಟಕಿ ಒರೆಸುವಾಗ, ಗಿಡಮರಗಳಿಗೆ ನೀರು ಹಾಕುವಾಗ, ಬಚ್ಚಲು, ಸಿಂಕುಗಳನ್ನು ತಿಕ್ಕಿ ತೊಳೆಯುವಾಗ ಸಹಾಯಕ್ಕೆ ಬರದ ಅವನ ಜಡ್ಡು ಮೈ ಕುರಿತು ಅಸಹ್ಯ ಅನ್ನಿಸುತ್ತದೆ. ಗಂಡ-ಹೆಂಡತಿ ಮಧ್ಯೆ ಪ್ರೀತಿ ಮೋಹ ಕಾಮ ಎಲ್ಲ ಇರಬೇಕಾದರೆ, ಅವರಿಬ್ಬರ ನಡುವೆ ಎಲ್ಲ ವಿಧದ ಕೆಲಸಗಳಲ್ಲೂ ಸಹಾಯ, ಸಹಕಾರ, ಕಾಳಜಿ ಇರಬೇಕಲ್ಲವೇ.. ಬರೀ ರಾತ್ರಿ ಕೆಲಸಕ್ಕೆ ಮಾತ್ರ ಹತ್ತಿರ ಬಂದರೆ ಸಾಕೇ? ಬಸವಣ್ಣಿ ಎಲ್ಲವನ್ನೂ ಎಷ್ಟು ಸಲೀಸಾಗಿ ಬಿಡಿಸಿ ಹೇಳಿದ್ದಳು... ಮತ್ತು ಅದರಂತೆ ಇದ್ದಾಳೆ ಕೂಡ. ಅವಳಿಗಿಲ್ಲದ ಅವ್ಯಕ್ತ ಭಯ, ಹಿಂಜರಿಕೆ, ಅಳು ತನಗೇಕೆ? ತಾನೇನೂ ತಪ್ಪು ಮಾಡ್ತಿಲ್ಲವಲ್ಲ...

ಏನೇನೂ ಸಾಧಿಸಲಿಲ್ಲ ಬದುಕಿನಲ್ಲಿ... ಬರೀ ದುಡಿದು ಮಣ್ಣಾಗಿ ಹೋಗ್ತೇನೆ ಒಂದು ದಿನ ಎಂಬ ಅಳುವೊಂದು ಎದೆಯೊಳಗೆ ಶುರುವಾದ ದಿನದಿಂದ ಎಂದೋ ಇದ್ದ ಬರವಣಿಗೆ ಅಭ್ಯಾಸ ಮುಂದುವರೆಸಿ ಒಂದಿಷ್ಟು ಕಥೆ ಕವನ ಬರೆದು ಬದಿಗಿಡುತ್ತಿದ್ದಾಳೆ ಅನಘಾ. ಲೈಬ್ರರಿ ಮೆಂಬರ್ ಕೂಡ ಆಗಿದ್ದಾಳೆ. ರಾತ್ರಿ ಒಂದಷ್ಟು ಹೊತ್ತು ಓದಲು ಪುಸ್ತಕ ಹಿಡಿದರೆ ಸಂದೀಪನ ಗೊಣಗೊಣ ಶುರುವಾಗಿದೆ... ಎಲ್ಲ ಕೆಲಸ ಮುಗಿಸಿ ಓದುತ್ತಾಳಾದ್ದರಿಂದ ಏನೂ ಹೇಳುವಂತಿಲ್ಲ ಅವನಿಗೆ... ವಾಟ್ಸಪ್ ಸ್ಟೇಟಸ್ಸು ಅವನಿಗೆ ಕಾಣದ ಹಾಗೆ ಮ್ಯೂಟ್ ಮಾಡಿ, ತನ್ನ ಬ್ಲಾಗುಗಳಲ್ಲಿ ಬಂದ ಬರಹ ಹಾಕಿಕೊಳ್ಳುತ್ತಾಳೆ... ಓದಿದವರು 'ಪರವಾಗಿಲ್ಲವೇ ನಮ್ ಅನಘಾ' ಎಂದುಕೊಂಡು ಮೆಸೇಜು ಮಾಡ್ತಾರೆ...

ಮೊನ್ನೆ ಲೋಕಲ್ ಪತ್ರಿಕೆಯಲ್ಲಿ ಕವಿತೆಯೊಂದು ಬಂದಿದ್ದು ಕೇಳಿ ಬ್ಯಾಂಕಲ್ಲಿ ಪೇಪರ್ ನೋಡಿದಾಗಿನಿಂದ ಕೆಂಡಾಮಂಡಲವಾಗಿದ್ದಾನೆ ಸಂದೀಪ... ಪೇಪರ್ ಓದುವ ರೂಢಿ ಕೂಡ ಇಲ್ಲದ ಅವನಿಗೆ ಬರವಣಿಗೆಯೆಂದರೆ ಹಾದರಕ್ಕೂ ಕಡೆ. 'ತನಗೆ ಹೇಳದೇ ಕೇಳದೇ ಪೇಪರಿಗೆ ಯಾಕೆ ಕಳಿಸಿದೆ ಪದ್ಯ?' ಅಂತ ಏರಿ ಬಂದ ಮೈ ಮೇಲೆ... ಅಡುಗೆ, ಮಗ, ಮನೆ ಎಲ್ಲಾ ಬಿಟ್ಟು ಗೋಷ್ಠಿ, ಕಮ್ಮಟ ಅಂತ ಹೊರಟುಬಿಡಲು ಇದು ಶ್ರೀಕಾರವಾ?' ಅಂತ ಹಾಳು ಮೂಳು ಹೊಲಸು ಮಾತಾಡಿ, ಕೊನೆಯ ಅಸ್ತ್ರವಾಗಿ ಅವಳ ಶೀಲದ ಜೊತೆಗೂ ಬರಹಗಾರರ ಹೆಸರು ಜೋಡಿಸಿ ಕೂಗಿಕೊಂಡಿದ್ದ. ಇವನ ಅನುಮತಿ ಇಲ್ಲದೇ ಒಂದು ಕವಿತೆ, ಲೇಖನ ಬರೆದು ಪತ್ರಿಕೆಗೆ ಕಳಿಸುವ ಸ್ವಾತಂತ್ರ್ಯ ಕೂಡ ಇಲ್ಲವಾ ನನಗೆ... ಶ್ಶೀ... ಅನಘಾಳಿಗೆ ಅವನ ಮೇಲಿದ್ದ ಚೂರುಪಾರು ಗೌರವ ಕೂಡ ಹೊರಟುಹೋಗಿತ್ತು. 'ನಿಮ್ಮ ಮಾವ ಕೂಡ ಹಿಂಗೇ ಇದ್ರು... ಅವರಂಗೇ ಮಗ' ಅಂದ ಅತ್ತೆಯ ಮಾತು ನೆನಪಾಗಿ, ತನ್ನ ಮಗ ಕೂಡ ಅಪ್ಪನ ಈ ವರ್ತನೆ ನೋಡಿ ನೋಡಿ ಭವಿಷ್ಯದಲ್ಲಿ ಒಂದು ಹೆಣ್ಣನ್ನು ಕತ್ತೆಯ ಹಾಗೆ ದುಡಿಸುವ, ಅವಳ ದುಡಿಮೆ ತಿಂದು ಕುಳಿತಲ್ಲೇ ಬದುಕುವ ಕಣ್ಣಪಸೆ ಬತ್ತಿಸಿಕೊಂಡ ಯಾಂತ್ರಿಕ ಗಂಡಸಾಗುತ್ತಾನಾ ಹಾಗಿದ್ದರೆ...?

ಭಯವಾಯಿತು ಅನಘಾಳಿಗೆ. ಅದರ ಮರುದಿನ, ಆದದ್ದಾಗಲಿ ನೋಡೇಬಿಡುವ... ತನ್ನದೇ ಹಣದ